ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 90-93
©*IIMRD*, Mysuru

IIMRD JOURNALS
www.iimrd.com

# ಶ್ರೀ ಅರವಿಂದರ ಜೀವನ ಚರಿತ್ರೆ 'ಬೆಳಕಿನ ಬೆಟ್ಟ' : ಒಂದು ವಿವೇಚನೆ

**ಕರಿಬಸವನಗೌಡ ಜಿ[*] ಮತ್ತು ಡಾ. ಬಿ.ಎಸ್. ಸುದೀಪ್[**]**

[*]ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸಂತ ಫ್ರಾನ್ಸಿಸ್ ಡಿ ಸೇಲ್ಸ್ ಕಾಲೇಜು, ಬೆಂಗಳೂರು.
[**]ಮುಖ್ಯಸ್ಥರು ಮತ್ತು ಸಹಾಯಕ ಪ್ರಾಧ್ಯಾಪಕರು, ಕನ್ನಡ ಸ್ನಾತಕೋತ್ತರ ಮತ್ತು ಸಂಶೋಧನಾ ವಿಭಾಗ,
ಜೆ.ಎಸ್.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***ಸಾರಾಂಶ* (Abstract)**

*ಶ್ರೀ ಅರವಿಂದರು ಬದುಕಿ ಬಾಳಿದ ಕಾಲಘಟ್ಟವು ಚಾರಿತ್ರಿಕವಾಗಿ ವಿಶಿಷ್ಟವಾದ ಕಾಲಘಟ್ಟವಾಗಿದೆ. ನಾವು ಗಾಂಧಿಯುಗವೆಂದು ಕರೆಯಲಾಗುವ ಕಾಲಘಟ್ಟದಲ್ಲಿ ಜೀವಿಸಿದ್ದರು. ಇಡೀ ಭಾರತವು ಪಾಶ್ಚಿಮಾತ್ಯ ನಾಗರಿಕತೆಯ ಪ್ರಭಾವಕ್ಕೆ ಸಿಲುಕಿ ಅದಕ್ಕೆ ಪ್ರತಿಯಾಗಿ ತನ್ನತನವನ್ನು ಕಂಡುಕೊಂಡು ತನ್ನ ಸಂಸ್ಕೃತಿಯ ವಿಶಿಷ್ಟ ಅನುಭಾವಿಕ ಮತ್ತು ಧಾರ್ಮಿಕತೆಯ ಸತ್ವವನ್ನು ಜಗತ್ತಿಗೆ ಪ್ರತಿಪಾದಿಸಿದ್ದು ಮಹತ್ವಪೂರ್ಣ ಸಂಗತಿಯಾಗಿದೆ. ಇಂತಹ ಅಭಿವ್ಯಕ್ತಿಯ ಪ್ರಾತಿನಿಧಿಕ ರೂಪವಾಗಿ ಅರವಿಂದರು ಪ್ರಕಟಗೊಂಡರು. ಇವರು ಮನುಷ್ಯನ ಒಳಜಗತ್ತಿನ ಪರಿಪಕ್ವತೆಯನ್ನು ಆಧರಿಸಿದ ಆಂತರಿಕ ಸತ್ವದ ಸಾಧನೆಯನ್ನು ಸಾಧಿಸಿದ ಬಗೆಯನ್ನು ಮತ್ತು ಅಂತಹ ಸಾಧನೆಯ ಮಾರ್ಗವನ್ನು ಇಡೀ ಜಗತ್ತಿಗೆ ಪ್ರಸ್ತುತ ಪಡಿಸಿದವರಾಗಿದ್ದಾರೆ. ಇಂತಹ ಸಾಧನೆಯ ಮಾರ್ಗವನ್ನು ನಿರ್ದಿಷ್ಟವಾಗಿ ಭಾರತಕ್ಕೆ ಮಾತ್ರ ಕಟ್ಟಿಹಾಕದೆ ಕಾಲ, ದೇಶಗಳನ್ನು ಮೀರಿದ ಮಾನವತೆಯ ಅಂತಃಕರಣವನ್ನು ಸಾರ್ವಕಾಲೀಕವಾಗಿಸಿದ ಯಶಸ್ಸು ಮತ್ತು ಕೀರ್ತಿ ಶ್ರೀ ಅರವಿಂದರದು. ಪ್ರಸ್ತುತ ಲೇಖನದಲ್ಲಿ ಡಾ. ಎಚ್. ತಿಪ್ಪೆರುದ್ರಸ್ವಾಮಿಯವರು ರಚಿಸಿರುವ ಶ್ರೀ ಅರವಿಂದರ ಜೀವನ ಚರಿತ್ರೆ ಕುರಿತಾದ ಬೆಳಕಿನ ಬೆಟ್ಟ ಕೃತಿಯನ್ನು ಸಮಗ್ರವಾಗಿ ವಿವೇಚಿಸಲಾಗಿದೆ.*

***ಮುಖ್ಯ ಪದಗಳು* (Keywords):** ಶ್ರೀಅರವಿಂದ, ಆಧ್ಯಾತ್ಮ, ತಿಪ್ಪೆರುದ್ರಸ್ವಾಮಿ, ಜೀವನ ಚರಿತ್ರೆ, ಬೆಳಕಿನ ಬೆಟ್ಟ.

**ಪೀಠಿಕೆ**

ಡಾ.ಎಚ್. ತಿಪ್ಪೇರುದ್ರಸ್ವಾಮಿ ಅವರ ಬೆಳಕಿನ ಬೆಟ್ಟವು ಶ್ರೀ ಅರವಿಂದರನ್ನು ಸಮಗ್ರವಾಗಿ ಗ್ರಹಿಸಿ ಅವರ ಸಾಧನೆಯ ಉನ್ನತಿಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುವ ವಿಶಿಷ್ಟ ಜೀವನ ಚರಿತ್ರೆಯಾಗಿದೆ. ಮೂಲತಃ ತಿಪ್ಪೇರುದ್ರಸ್ವಾಮಿ ಅವರೂ ಸಹ ಅನುಭಾವಿಕ ನೆಲೆಯಲ್ಲಿ ಅರವಿಂದರ ಎತ್ತರಕ್ಕೆ ಏರಬಲ್ಲ ಚೇತನವಾದ್ದರಿಂದಲೇ ಈ ಕೃತಿಯೂ ಸಹ ವೈಶಿಷ್ಟ್ಯಪೂರ್ಣವಾಗಿ ರೂಪುಗೊಂಡಿದೆ. ಅರವಿಂದರನ್ನು ತಿಪ್ಪೇರುದ್ರಸ್ವಾಮಿ ಅವರು ಗ್ರಹಿಸಿದ ಕ್ರಮ ಹಾಗೂ ಅವರ ಅನುಭಾವಿಕತೆಯನ್ನು, ಆಧ್ಯಾತ್ಮಿಕತೆಯನ್ನು ಒಂದು ವಿಶಿಷ್ಟ ಕ್ರಮವೊಂದರಲ್ಲಿ ಜೋಡಿಸಿ ಅರ್ಥೈಸಿದ ವಿಧಾನವು ಇದನ್ನೊಂದು ಶ್ರೇಷ್ಠ ಕೃತಿಯಾಗಿಸಿದೆ. ಬಹುಶಃ ಭಾರತೀಯ ಭಾಷೆಗಳಲ್ಲಿ ಹಾಗೂ ಜಗತ್ತಿನ ಇತರೆ ಭಾಷೆಗಳಲ್ಲಿ ಅರವಿಂದರ ಆಧ್ಯಾತ್ಮಿಕ ಸಾಧನೆಯನ್ನು ಇಷ್ಟೊಂದು ಅರ್ಥಪೂರ್ಣವಾಗಿ ಪರಿಣಾಮಕಾರಿಯಾಗಿ ವಿವರಿಸಿರಲಿಕ್ಕಿಲ್ಲವೇನೋ ಎನಿಸುತ್ತದೆ. ಅಂತಹ

*Please cite this article as: ಕರಿಬಸವನಗೌಡ ಈ ; ಬಿ.ಎಸ್. ಸುದೀಪ್ (2021).ಶ್ರೀ ಅರವಿಂದರ ಜೀವನ ಚರಿತ್ರೆ 'ಬೆಳಕಿನ ಬೆಟ್ಟ' : ಒಂದು ವಿವೇಚನೆ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 90–93*

ಆಧ್ಯಾತ್ಮವನ್ನು ಸಾಧಿಸಲು ತಿಪ್ಪೇರುದ್ರಸ್ವಾಮಿ ಅವರಂತಹ ವ್ಯಕ್ತಿತ್ವಗಳಿಗೆ ಮಾತ್ರ ಸಾಧ್ಯ ಎಂಬುದನ್ನು ಇಲ್ಲಿ ಹೇಳಲೇಬೇಕು.

ಕೃತಿಯ ಆರಂಭದಲ್ಲಿ ಬಾಲಕನಾಗಿರುವಾಗಲೇ ಅರವಿಂದರನ್ನು ಭಾರತೀಯ ಸಂಸ್ಕೃತಿಗೆ ದೂರವಾಗಿ, ಮಾತೃಭಾಷೆಯಾದ ಬಂಗಾಳಿಯಿಂದಲೂ ಬೇರ್ಪಡಿಸಿ ಸಂಪೂರ್ಣ ಪಾಶ್ಚಾತ್ಯ ಸಂಸ್ಕೃತಿಗೆ ಮತ್ತು ಇಂಗ್ಲೀಷ್ ಭಾಷೆಗೆ ಅರವಿಂದರನ್ನು ಒಗ್ಗಿಸುವ ಅವರ ತಂದೆಯ ಪ್ರಯತ್ನವನ್ನು ವಿಶದಪಡಿಸಲಾಗಿದೆ. ಭಾರತೀಯತೆ ಎನ್ನುವುದರ ಬಗೆಗೆ ಅವರ ತಂದೆಗಿದ್ದ ದ್ವೇಷವನ್ನೂ ಅ ಇಷ್ಟತೆಯನ್ನು ವಿವರಿಸುತ್ತಲೇ ಇಂಗ್ಲೆಂಡಿನಲ್ಲಿರುವಾಗ ಅರವಿಂದರ ಹದಿಹರೆಯದ ವಯಸ್ಸಿನಲ್ಲಿ ಯುರೋಪಿಯನ್ ಚರಿತ್ರೆಯ ಬಗೆಗೆ ಆಸಕ್ತಿ ಮೂಡಿದ್ದನ್ನು ನಂತರದಲ್ಲಿ ಅದು ಭಾರತೀಯ ಚರಿತ್ರೆಯ ಬಗೆಗೂ ಆಸಕ್ತಿ ತಳೆದದ್ದನ್ನು ನಿರೂಪಿಸಿಲಾಗಿದೆ. ಇಲ್ಲಿ ಬಾಲಕನ ಮನಸ್ಸು ಹಾಗೂ ಯೌವನಕ್ಕೆ ಕಾಲಿಡುತ್ತಿದ್ದ ಅರವಿಂದರು ಹೇಗೆ ಭಾರತೀಯ ಸಂಸ್ಕೃತಿ ಮತ್ತು ಅನುಭಾವದ ಕಡೆ ಒಲಿದರೆಂಬುದನ್ನು ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ. ಅದಾಗಲೇ ಇಂಗ್ಲೆಂಡಿನಲ್ಲಿನ ಭಾರತೀಯರಲ್ಲಿ ಮನೆ ಮಾಡಿದ್ದ ಬ್ರಿಟೀಷ್ ವಿರೋಧಿ ಧೋರಣೆ ಹಾಗೂ ರಾಷ್ಟ್ರೀಯ ವಿಮೋಚನೆಯ ಭಾವನೆಗಳು ಅರವಿಂದರನ್ನೂ ಪ್ರಭಾವಿಸಿದವು.

ಇಂಗ್ಲೆಂಡಿನಲ್ಲಿ ಅವರ ಆಶ್ರಯದಾತರ ನೆರವಿಲ್ಲದೆಯೇ ಅರವಿಂದರು ಹಾಗೂ ಅವರ ಸಹೋದರರು ಅಲ್ಲಿ ಜೀವನ ನಿರ್ವಹಿಸಬೇಕಾದ ದುರ್ಭರತೆಯನ್ನು ಎಳೆಎಳೆಯಾಗಿ ಚಿತ್ರಿಸಲಾಗಿದೆ. ಹಾಗೆಯೇ ಬ್ರಿಟಿಷ್ ಭಾರತದಲ್ಲಿ ಅತ್ಯಂತ ಪ್ರತಿಷ್ಠಾತ್ಮಕ ನಾಗರಿಕ ಹುದ್ದೆಗೆ ಅರ್ಹತೆಯುಳ್ಳ ಐಸಿಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾದರೂ ಪೂರಕವಾಗಿ ಕುದುರೆ ಸವಾರಿ ಪರೀಕ್ಷೆಯಲ್ಲಿ ಪಾಲ್ಗೊಳ್ಳದೇ ಹೋದುದು ಸಹ ಅರವಿಂದರ ಬ್ರಿಟೀಷ್ ವಿರೋಧಿ ಧೋರಣೆಯಾಗಿತ್ತು ಎಂಬುದನ್ನು ವಿವರಿಸಲಾಗಿದೆ. ಅವರು ಉದ್ದೇಶಪೂರ್ವಕವಾಗಿಯೇ ಈ ಪರೀಕ್ಷೆಯನ್ನು ತಪ್ಪಿಸಿಕೊಂಡುದು ಅವರ ಜೀವನದ ದಿಕ್ಕನ್ನೇ ಬದಲಾಯಿಸಿತೆಂದು ಹೇಳಬಹುದು. ಎಲ್ಲಿಯೋ ಬ್ರಿಟಿಷರಲ್ಲಿ ಗುಲಾಮಗಿರಿ ಮಾಡುತ್ತಾ ಅವರನ್ನು ಮೆಚ್ಚಿಸುವ ಭಾರತೀಯರನ್ನು ಅವರ ಕಪಿಮುಷ್ಠಿಯಲ್ಲಿಡಲು ಸಹಾಯ ಮಾಡುವ ಅಧಿಕಾರಕ್ಕಿಂತ ಸ್ವತಂತ್ರವಾಗಿ ರಾಷ್ಟ್ರೀಯ ವಿಮೋಚನೆಯಲ್ಲಿ ತೊಡಗಿಕೊಳ್ಳುವ ಅರ್ಥಪೂರ್ಣ ಹೋರಾಟದ ಕಡೆಗೆ ಅವರನ್ನು ಸಾಗುವಂತೆ ಮಾಡುವ ಸದುದ್ದೇಶ ಇದರ ಹಿಂದೆ ಇದ್ದಿತೆಂಬುದನ್ನು ತಿಪ್ಪೇರುದ್ರಸ್ವಾಮಿ ಅವರು ವ್ಯಾಖ್ಯಾನಿಸಿರುವುದು ಅರ್ಥಪೂರ್ಣವಾಗಿದೆ.

ಇಲ್ಲಿಂದ ರಾಜಕೀಯ ಹೋರಾಟಗಳನ್ನು, ಜನಾಭಿಪ್ರಾಯವನ್ನು ರೂಪಿಸುತ್ತಲೇ ರಾಜಕೀಯದಿಂದ ವಿಮುಖರಾಗಿ ಆಧ್ಯಾತ್ಮಿಕ ಔನ್ನತ್ಯದ ಶಿಖರದ ಕಡೆಗೆ ಹೇಗೆ ಪ್ರಯಾಣಿಸಿದರೆಂಬುದನ್ನು ಎಳೆಎಳೆಯಾಗಿ ಬಿಚ್ಚಿಡಲಾಗಿದೆ. ದೇಶದಲ್ಲಿ ಸ್ವಾತಂತ್ರ್ಯ ಚಳವಳಿಯು ಉತ್ತುಂಗಕ್ಕೇರಿದಾಗ ಭೌತಿಕವಾದ ಹೋರಾಟವೊಂದೆಡೆಯಾದರೆ, ದೇಶ ಕಾಲಾತೀತವಾಗಿ ಮನುಕುಲವನ್ನು ಅಂತರಂಗದ ಕತ್ತಲಿನಿಂದ ಬಿಡುಗಡೆ ಮಾಡಲು ಅರವಿಂದರು ನಡೆಸಿದ ಅನುಭಾವಿಕ ಹೋರಾಟವು ಒಂದೆಡೆ ಕಾಣಬಹುದಾಗಿತ್ತು. ಸೆರೆಮನೆಯಲ್ಲಿ ಬಂಧಿಯಾದರೂ ಸಹ ಅವರು ನಿರ್ಲಿಪ್ತರಾಗಿ ಭೌತಿಕ ಸಂಗತಿಗಳನ್ನು ತೃಣಮಾತ್ರವಾಗಿ ಕಾಣುತ್ತಾ ಪಾರಲೌಕಿಕ ಸಂಗತಿಗಳನ್ನು, ಅರಿವನ್ನು ಏಕಸೂತ್ರವೊಂದರಲ್ಲಿ ಅಳವಡಿಸುತ್ತಾ ಮನುಷ್ಯ ಜಗತ್ತಿಗೆ

ಮಾತ್ರ ಸಾಧ್ಯವಾದ ಆಧ್ಯಾತ್ಮಿಕ ಸಾಧನೆಯ ಉತ್ತುಂಗದ ಶಿಖರವನ್ನು ಅಧಿಗಮಿಸುವ ನಿಟ್ಟಿನಲ್ಲಿ ಅಡಿಯಿಡುತ್ತಿದ್ದ ಅರವಿಂದರ ಮನೋಸಾಮರ್ಥ್ಯವನ್ನು, ಮೇಧೋಸಾಮರ್ಥ್ಯವನ್ನು ತಿಪ್ಪೇರುದ್ರಸ್ವಾಮಿ ಅವರು ಚಿತ್ರಿಸಿರುವ ಪರಿ ಶ್ಲಾಘನೀಯವಾಗಿದೆ.

ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಮನುಷ್ಯ ಕೇವಲ ಭೌತಿಕತೆಯ ಕಡೆಗೆ ಹೆಚ್ಚಿನ ಗಮನ ನೀಡುತ್ತಿದ್ದು, ಆಂತರಿಕ ವಿಕಾಸದ ಕಡೆಗೆ ಅಷ್ಟಾಗಿ ಗಮನ ನೀಡುತ್ತಿಲ್ಲ. ಆಧ್ಯಾತ್ಮದ ಹೆಸರಿನಲ್ಲಿ, ಮತಾಂಧ ಮತ್ತು ಢೋಂಗಿ ಗುರುಗಳೇ ಇಂದು ಅಧಿಕವಾಗಿರುವಾಗ ಅರವಿಂದರು, ರಾಮಕೃಷ್ಣರು ಮತ್ತು ವಿವೇಕಾನಂದರಂತವರ ಆಧ್ಯಾತ್ಮ ವಿಚಾರಗಳು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತವೆ. ಗುಡಿ, ಚರ್ಚು, ಮಸೀದಿಗಳನ್ನು ತ್ಯಜಿಸಿ ಹೊರಬನ್ನಿ ಎಂದು ಪ್ರತಿಪಾದಿಸಿದ ಕುವೆಂಪು ಅವರ ವೈಚಾರಿಕತೆಯ ಮೇಲೂ, ಬರಹಗಳ ಮೇಲೂ ಈ ಮೂವರ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು. ಅಂತೆಯೇ ಕುವೆಂಪು ತುಂಬಾ ಹಿಂದೆಯೇ ಆಧ್ಯಾತ್ಮಿಕತೆಯು ವೈಜ್ಞಾನಿಕವಾಗಬೇಕೆಂದು ಪ್ರತಿಪಾದಿಸಿದರು. ಇಂತಹ ವೈಜ್ಞಾನಿಕತೆಯನ್ನು ಅರವಿಂದರಲ್ಲಿ ನಾವು ಕಾಣಬಹುದಾಗಿದೆ.

ಅರವಿಂದರ ಭಾರತೀಯತೆಯ ಮೂಲ ಬೇರುಗಳನ್ನೇ ತುಂಡರಿಸಲು ಅವರ ತಂದೆಯವರು ಪ್ರಯತ್ನಿಸಿದಾಗ್ಯೂ ಈ ನೆಲದ ಸಾವಯವ ಸಂಬಂಧವನ್ನು ಅರವಿಂದರು ಕಡಿದುಕೊಳ್ಳಲು ಸಾಧ್ಯವಾಗಲಿಲ್ಲ. ಬದಲಿಗೆ ಆ ಬಂಧವು ಮತ್ತಷ್ಟೂ ಗಟ್ಟಿಗೊಳ್ಳುತ್ತಾ ಸಾಗಿತು. ಅರವಿಂದರು ಯುಕ್ತ ವಯಸ್ಸಿನವರಾಗುವಷ್ಟರಲ್ಲೇ ಜಗತ್ತಿನ ಶ್ರೇಷ್ಠ ಸಾಹಿತ್ಯವನ್ನೆಲ್ಲಾ ಇಂಗ್ಲಿಷಿನ ಮೂಲಕ ಒಳಗು ಮಾಡಿಕೊಂಡಿದ್ದರು. ತಮ್ಮ ಸಮಕಾಲೀನ ಶ್ರೇಷ್ಠ ಸಾಹಿತಿಗಳೊಂದಿಗಿನ ಒಡನಾಟವೂ ಗಮನಾರ್ಹವಾದುದಾಗಿತ್ತು. ಲೇಖಕರು ಅರವಿಂದರ ಆರಂಭಿಕ ಕಾವ್ಯರಚನೆಯನ್ನು ಉಲ್ಲೇಖಿಸುತ್ತಾ ಹೀಗೆ ವಿವರಿಸುತ್ತಾರೆ. "ಇದೆಲ್ಲಕ್ಕಿಂತ ಮುಖ್ಯವಾದುದೆಂದರೆ ಇವರ ಕಾವ್ಯ ರಚನೆ. ಮ್ಯಾಂಚೆಸ್ಟರ್‌ನಲ್ಲಿರುವಾಗಲೇ ಅದು ಪ್ರಾರಂಭವಾಗಿತ್ತು. ಈಗ ಅವರ ಅಧ್ಯಯನ ಅನುಭವಗಳು ಹೆಚ್ಚಿದಂತೆ ಸಾಹಿತ್ಯ ಸೃಷ್ಟಿಯೂ ಹೆಚ್ಚು ಸತ್ವಶಾಲಿಯಾಗುತ್ತಾ ನಡೆದಿತ್ತು. ಭಾವ ಮತ್ತು ಭಾಷೆಗಳೆರಡರ ದೃಷ್ಟಿಯಿಂದಲೂ ಉತ್ತಮ ಮಟ್ಟದ ಕವಿತೆಗಳನ್ನು ಈಗ ರಚಿಸುತ್ತಿದ್ದರು. ಅವರ ಅಣ್ಣ ಮನಮೋಹನನೂ ಕವನಗಳನ್ನು ಬರೆಯುತ್ತಿದ್ದನು. ಅವನ ಕೆಲವು ಕವನಗಳು ಆಕ್ಸಫರ್ಡ್‌ನಿಂದ ಹೊರಬಿದ್ದ ಕವನಸಂಕಲನವೊಂದರಲ್ಲಿ ಪ್ರಕಟವಾಗಿದ್ದವು. ಲಾರೆನ್ಸ್ ಬಿನಿಯನ್ ಅವನ ಸಹಪಾಠಿಯಾಗಿದ್ದ. ಆಸ್ಕರ್‌ವೈಲ್ಡ್ ಮೊದಲಾದ ತರುಣ ಸಾಹಿತಿಗಳು ಆತನ ಗೆಳೆಯರಾಗಿದ್ದರು. ಮನಮೋಹನನ ಈ ಸಾಹಿತ್ಯ ಚಟುವಟಿಕೆಗಳೂ ಅರವಿಂದರ ಮೇಲೆ ಪ್ರಭಾವವನ್ನು ಬೀರಿರಬೇಕು" ಎಂಬುದಾಗಿ ವಿವರಿಸುತ್ತಾರೆ. ಆಸ್ಕರ್‌ವೈಲ್ಡ್‌ನಂತಹ ಲೇಖಕರು ಸಹ ಅರವಿಂದರು ಮತ್ತವರ ಸಹೋದರರ ಪರಿಚಿತ ವಲಯದಲ್ಲಿದ್ದುದು ವಿಶೇಷವಾಗಿತ್ತು. ಅಂದರೆ ಅರವಿಂದರು ತಮ್ಮ ಸಮಕಾಲೀನ ಸಂದರ್ಭದ ಇಂಗ್ಲೀಷ್ ಸಾಹಿತ್ಯದೊಂದಿಗೆ ಭಾರತೀಯ ಸಾಹಿತ್ಯವನ್ನು ಮುಖಾಮುಖಿಯಾಗಿಸಲು ಸಾಧ್ಯವಾಯಿತು. ಹಾಗೆಯೇ ಚರಿತ್ರೆ, ತತ್ವಶಾಸ್ತ್ರ ಮತ್ತು ಆಧುನಿಕತೆಯ ಅರಿವಿನ ವಿಸ್ತಾರವನ್ನು ಭಾರತೀಯತೆಯೊಂದಿಗೆ, ಭಾರತದ ಅನುಭಾವ ಜಗತ್ತಿನೊಂದಿಗೆ ಅನುಸಂಧಾನಗೊಳಿಸಲು ಸಾಧ್ಯವಾಯಿತು ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಅರವಿಂದರಿಗೆ ಓದುವ ಹುಚ್ಚು ಅಧಿಕವಾಗಿತ್ತು. ಅವರು ಇಂಗ್ಲೀಷ್, ಫ್ರೆಂಚ್, ಲ್ಯಾಟಿನ್, ಗ್ರೀಕ್ ಭಾಷೆಗಳಲ್ಲೂ ಓದಲು ಸಮರ್ಥರಾಗಿದ್ದುದರಿಂದ ಅವರ ಓದಿನ ಹಸಿವಿಗೆ ತಕ್ಕ ಪುಸ್ತಕಗಳು ಲಭ್ಯವಾಗುತ್ತಿದ್ದವು. ಅವನ್ನಂತೂ ಹೊರೆಹೊರೆಯಾಗಿ ತರಿಸಿಕೊಳ್ಳುತ್ತಿದ್ದರು. ಮೂಲಭೂತ ಅವಶ್ಯಕತೆಗಳನ್ನು ಹೊರೆತುಪಡಿಸಿದರೆ ಅವರ ಹಣವೆಲ್ಲಾ ಇದಕ್ಕೆ ವ್ಯಯವಾಗುತ್ತಿತ್ತು. ಅವರ ತಾಯಿ, ತಂಗಿಯರು ಸಹ ಪ್ರತಿ ತಿಂಗಳು ಅರವಿಂದರಿಗೆ ಹಣ ಕಳಿಸುತ್ತಿದ್ದರು. ಹಣದಂತಹ ಶುದ್ಧ ಲೌಕಿಕ ಸಂಗತಿಯ ಕಡೆಗೆ ಅರವಿಂದರು ಉದಾಸೀನ ಮತ್ತು ನಿರ್ಲಕ್ಷ್ಯದಿಂದಿರುತ್ತಿದ್ದರು. ಹಾಗೆಯೇ ಅವರು ಅತ್ಯಂತ ಸರಳವಾದ ಜೀವನವನ್ನು ನಡೆಸುತ್ತಿದ್ದರು. ತೆಂಗಿನ ನಾರಿನ ಹಾಸಿಗೆಯಲ್ಲಿಯೇ ಅವರು ಮಲಗುತ್ತಿದ್ದುದು. ಅದರ ಮೇಲೆ ಹುಲ್ಲಿನ ಚಾಪೆಯೇ ಬೆಡ್‌ಷೀಟ್ ಆಗಿತ್ತು. ಮದುವೆಯಾದರೂ ಸಹ ಈ ಸರಳ ಜೀವನದಿಂದ ಅವರು ದೂರ ಸರಿಯಲಿಲ್ಲ. ಇಡೀ ಜೀವನವನ್ನು ಒಂದು ತಪಸ್ಸಿನಂತೆ ನಿರ್ವಹಿಸದರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕಾಂಗ್ರೆಸ್ಸಿನ ಮಂದಗಾಮಿಗಳೊಂದಿಗೆ ವಿಭೇಧಿಸಿ ಉಗ್ರಗಾಮಿತ್ವವನ್ನು ಪ್ರಕಟಪಡಿಸಿದರೂ ನಂತರದಲ್ಲಿ ಎಲ್ಲ ಹೋರಾಟಗಳಿಗೂ ಮತ್ತು ಬಾಹ್ಯ ಜಗತ್ತಿಗೂ ವಿಮುಖರಾಗಿ ಆತ್ಮೋನ್ನತಿಯ ಹಾದಿಯಲ್ಲಿ ಪಯಣಿಸಿದರೆನ್ನುವುದಕ್ಕೆ ಪಾಂಡಿಚೆರಿಯಲ್ಲಿ ಅವರ ಜೀವನವೇ ನಿದರ್ಶನವಾಗಿದೆ. ಈ ಆತ್ಮೋನ್ನತಿಯ ಹಾದಿಯಲ್ಲಿ ಅವರ ಲೇಖನಿಯಿಂದ ಮೂಡಿ ಬಂದ ಕೃತಿಗಳಂತೂ ಅಭೂತಪೂರ್ವವಾಗಿವೆ. ತಿಪ್ಪೇರುದ್ರಸ್ವಾಮಿಗಳವರು ಪ್ರಸ್ತುತ ಜೀವನ ಚರಿತ್ರೆಯ ಕಡೆಯಲ್ಲಿ ಆ ಕೃತಿಗಳ ಮಹತ್ವವನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಹೇಗೆ ಅವು ಜಗತ್ತಿನ ಸಾರ್ವಕಾಲೀಕ ಮತ್ತು ಸರ್ವಕಾಲೀನ ಸಂಗತಿಗಳನ್ನು ಪ್ರತಿಪಾದಿಸುತ್ತವೆ ಎಂಬುದನ್ನು ವಿವರಿಸಿದ್ದಾರೆ.

**ಉಪಸಂಹಾರ**

ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ವ್ಯಕ್ತಿತ್ವವೇ ವಿಶೇಷವಾದದ್ದು. ಆಧುನಿಕ ಕನ್ನಡ ಸಾಹಿತ್ಯ ಬೆಳವಣಿಗೆಯಲ್ಲಿ ಅವರದು ಪ್ರಮುಖ ಪಾತ್ರವಿದೆ. ಶರಣ ಕೇಂದ್ರಿತ ಕಾದಂಬರಿಗಳು, ನಾಟಕಗಳು, ಸಂಸ್ಕೃತಿ ಅಧ್ಯಯನಗಳ ಮೂಲಕ ಸುಸಂಸ್ಕೃತ ಸಮಾಜದ ಕಟ್ಟುವಿಕೆಯ ಕನಸುಗಳನ್ನು ಕಟ್ಟಿದವರು ಶ್ರೀಯುತರು. ಆ ಹಿನ್ನೆಲೆಯಲ್ಲಿ ಅವರು ಶ್ರೀ ಅರವಿಂದರ ಕುರಿತು ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಶ್ರೀ ಅರವಿಂದರ ವ್ಯಕಿತ್ವವನ್ನು ಸರಳವಾಗಿ ಕಿರಿಯರಿಂದ ಹಿರಿಯರವರೆಗೆ ಪ್ರಿಯವಾಗುವಂತೆ ನಿರೂಪಿಸಿದ್ದಾರೆ ಈ ಕೃತಿಯಲ್ಲಿ. ಕನ್ನಡ ಸಾಹಿತ್ಯದಲ್ಲಿ ಬಂದಿರುವ ಪ್ರಮುಖ ಜೀವನ ಚರಿತ್ರೆಗಳಲ್ಲಿ ಇದು ಕೂಡ ಅಮೂಲ್ಯವಾದದ್ದು.

**ಆಕರ ಗ್ರಂಥ**


- ತಿಪ್ಪೆರುದ್ರ ಸ್ವಾಮಿ ಎಚ್. (2006). ಬೆಳಕಿನ ಬೆಟ್ಟ. ಕರ್ನಾಟಕ ನಿಲಯಂ ಟ್ರಸ್ಟ್, ಪಾಂಡಿಚೆರಿ.